ಲಿಫ್ಟ್ ಬಳಿ ನಾಲ್ಕನೆಯ ಅಂತಸ್ತಿನಲ್ಲಿರುವ ರಿಟೈರ್ಡ್ ಬ್ಯಾಂಕ್ ಆಫೀಸರ್ ರಾಮನಾಥನ್ ಕಾಣಿಸಿ "ನಾಳೆಯೇ ವರ್ಡಿಕ್ಟ್ ಅಲ್ಲವೆ. ನ್ಯೂಸ್‌ನಲ್ಲಿ ಹೇಳಿದರು. ಅಲ್ ದ ಬೆಸ್ಟ್. ಗಾಡ್ ಬ್ಲೆಸ್ ಯು ಮೈ ಚೈಲ್ಡ್" ಎಂದರು.

*****

ಮುಂಜಾನೆಯಿಂದ ಮನೆಯಲ್ಲಿ ನ್ಯೂಸ್ ಚಾನಲ್‌ಗಳಲ್ಲಿ, ಹಿಂದಿ ಇಂಗ್ಲಿಷ್ ಭಾಷೆಗಳಲ್ಲಿ ನ್ಯೂಸ್ ಆಗೀಗ ಕೇಳಿಸುತ್ತಲೇ ಇದೆ. ರಿಮೋಟ್‌ನ ಮೇಲೆ ಅಪ್ಪನ ಬೆರಳುಗಳು ಓಡಾಡುತ್ತಲಿವೆ. ಅಜ್ಜ ಟೀವಿ ಬಿಟ್ಟು ಕದಲುತ್ತಿಲ್ಲ. ಅಮ್ಮ ಅಡುಗೆ ಮಾಡುತ್ತಾ ಪೂಜೆ ಮಾಡುತ್ತಾ, ಪೂಜೆ ಮಾಡುತ್ತಾ ಅಡುಗೆ ಮಾಡುತ್ತಲೇ ಟೀವಿಯೆಡೆಗೆ ಕಣ್ಣಿಟ್ಟು ಆಗಾಗ ದೇಹವನ್ನು ಟೀವಿಯ ಮುಂದೆ ತಂದು ನಿಲ್ಲಿಸುತ್ತಿದ್ದಾಳೆ. ಅವರೆಲ್ಲರ ನಡುವೆ ತನ್ನ ಸೆಲ್‌ಫೋನ್‌ನಲ್ಲಿ ಚಾಟ್ ಮಾಡುತ್ತ ಕುಳಿತಿದ್ದಾಳೆ ತಂಗಿ.

"ಸ್ವಲ್ಪ ಡಿಕಾಕ್ಷನ್ ಜಾಸ್ತಿ ಹಾಕಮ್ಮ... ಅವರಿವರು ಬರುತ್ತಾರೆ" ಅಮ್ಮ ಹೇಳುತ್ತಿದ್ದಾಳೆ ಅಜ್ಜಿಗೆ.

"ಕೆಲವರು ಕಾಫಿ ಕುಡಿಯುವುದಿಲ್ಲ. ಸ್ವಲ್ಪ ಮಜ್ಜಿಗೆನೂ ಮಾಡಿಟ್ಟರಾಯಿತು" ಎನ್ನುತ್ತಿದ್ದಾಳೆ ಅಜ್ಜಿ ಅಮ್ಮನೊಂದಿಗೆ.

ಬೇರೆ ಬೇರೆಡೆಯಿಂದ ಎಲ್ಲರಿಗೂ ಫೋನ್ ಕಾಲ್ಸ್ ಒಂದಾದಮೇಲೆ ಒಂದರಂತೆ ಬರುತ್ತಲೇ ಇವೆ.

ಈಗಲೇ... ಮಧ್ಯಾಹ್ನಕ್ಕೆ ಬರಬಹುದು. ಸಿ.ಎನ್.ಎನ್. ಸೆಟ್‌ನವರು ಚೆನ್ನಾಗಿ ಕವರೇಜ್ ಕೊಡುತ್ತಿದ್ದಾರೆ. ಎನ್.ಡಿ. ಟೀವಿಯವರು ಪರವಾಗಿಲ್ಲ. ಸರಿಯಾಗಿ ತೀರ್ಪು ನೀಡದಿದ್ದರೆ ಅರುಣೋಬ್ ತೊಳೆದು ಬಿಡುತ್ತಾನೆ. ಎ.ಬಿ.ಎನ್., ಟೀವಿ.9ನವರು ಎಕ್ಸ್‌ಕ್ಲೂಸಿವ್ ಎನ್ನುತ್ತಾ ಏನೇನೋ ಮಾತುಗಳು ಕಿವಿಗೆ ಅಪ್ಪಳಿಸುತ್ತಿವೆ.

"ಇದೇನಿದು, ಹೀಗೆ ಮಿಂಚುವ ಡಿಸೈನ್ ಸೀರೆಯನ್ನುಟ್ಟಿರುವೆ. ಸಾಧಾರಣದ್ದು ಉಡಬಾರದಿತ್ತೆ?..." ಮನೆಗೆ ಬಂದವರನ್ನು ಯಾರೋ ಕೇಳುತ್ತಿದ್ದಾರೆ.

"ನನ್ನ ಹತ್ತಿರ ಅಂತಹವು ಇಲ್ಲ..."

"ಮೊನ್ನೆ ದೊಡ್ಡಜ್ಜಿಯ ಮನೆಗೆ ಪೂಜೆಗೆ ಉಟ್ಟಿದ್ದೆಯಲ್ಲಾ..." ಸಲಹೆ ಕೇಳಿಸುತ್ತಿದೆ.

"ಟೀವಿಯವರು ಬರುತ್ತಾರೇನೋ... ಸ್ವಲ್ಪ ಶೇವ್ ಮಾಡಿಕೋ" ಯಾರೋ ಹೇಳುತ್ತಿದ್ದಾರೆ.

"ಮುಖ ತೋರಿಸುವುದಿಲ್ಲವಲ್ಲ" ಇನ್ಯಾರದೋ ಉದ್ಗಾರ.

"ಹುಡುಗಿಯನ್ನು ತೋರಿಸಲಿಕ್ಕಿಲ್ಲ... ತಂದೆಯಾಗಿ ನಿಮ್ಮ ಅಭಿಪ್ರಾಯಗಳನ್ನು ಕೇಳಬಹುದಲ್ಲವೆ" ಯಾರೋ ಉಸುರುತ್ತಿದ್ದಾರೆ.

ಕೆಲ ಮಾತುಗಳು ಪೂರ್ತಿಯಾಗಿಯೂ ಅಸ್ಪಷ್ಟವಾಗಿಯೂ ಕಿವಿಗೆ ಅಪ್ಪಳಿಸುತ್ತಿವೆ.

ಈ ಎಲ್ಲ ಗದ್ದಲದ ನಡುವೆ ಚೈತನ್ಯ, ಆತನ ಪೇರೆಂಟ್ಸ್ ಬಂದರು.

"ನಿಮ್ಮೊಂದಿಗೆ ಈ ವಿಷಯ ಮಾತಾಡುವಂತೆ ಎಂದಿನಿಂದಲೋ ಚೈತನ್ಯನಿಗೆ ಹೇಳುತ್ತಲೇ ಇದ್ದೇವೆ. ಈಗಲ್ಲ ಆಗಲ್ಲ ಅಂತ ಮುಂದಕ್ಕೆ ಹಾಕುತ್ತಿದ್ದಾನೆ. ನಡೆದುದರಲ್ಲಿ ಹುಡುಗಿಯ ತಪ್ಪೇನು ಇಲ್ಲವೆಂಬುದು ಗೊತ್ತಿದೆ. ಆದರೂ ತಿಳಿದು ತಿಳಿದು ಈ ಮದುವೆ ಮಾಡಲಾರೆವಲ್ಲ. ರದ್ದು ಮಾಡದೇ ಗತ್ಯಂತರವಿಲ್ಲ. ಮುಂಜಾನೆಯಿಂದ ಮಾಧ್ಯಮಗಳೆಲ್ಲ ಕವರೇಜ್ ಮಾಡುತ್ತ 'ಅಜೇಯ' ಸ್ನೇಹಿತನೆಂದು ಹೇಳುತ್ತಿದ್ದಾರೆ. ಈ ಹಿಂದೆಯೂ ಹೇಳಿದ್ದು ನಿಜ. ಇಂದು ಅವರೇನಾದರೂ ಇವರ ಪ್ರೀತಿ, ಮದುವೆ ಕುರಿತು ಕೇಳುತ್ತಾರೇನೋ. ಆದ್ದರಿಂದಲೇ ಇದು ತಕ್ಕ ಸಮಯವಲ್ಲದಿದ್ದರೂ ಹೇಳಬೇಕಾಗಿ ಬಂದಿದೆ. ಕ್ಷಮಿಸಿ, ಅವರಿಬ್ಬರೂ ಸ್ನೇಹಿತರೆಂದೇ ಹೇಳಿ. ಮದುವೆ ರದ್ದುಗೊಳಿಸಿದ್ದನ್ನು